DOWNLOAD

Kannada Rathi Kathegalu



ಸೈನ್ಯವು ಹಾದುಹೋಗಲು ಅನುಮತಿ ನೀಡದೇ ಹೋದಲ್ಲಿ ಏನು ಮಾಡುವುದು?'' ಎಂದು ಚಿಂತೆ ವ್ಯಕ್ತಮಾಡಿದ ರಾಜ.

''ರಾಜನ್, ಯು ರಾಜನಿಗೆ ಅನುಮತಿ ನೀಡಲು ಇಷ್ಟ ಇಲ್ಲದೇ ಹೋದ ಪಕ್ಷದಲ್ಲಿ ಆತ ನಿಮ್ಮ ಕಾಣಿಕೆಗಳನ್ನು ಸ್ವೀಕರಿಸದೇ ಮರಳಿ ಕಳುಹಿಸಬಹುದು. ಒಂದು ವೇಳೆ ಆತ ಕಾಣಿಕೆ ಸ್ವೀಕರಿಸಿದರೆ ಅನುಮತಿ ಕೊಡಲು ಸಮ್ಮತಿ ಇದೆ ಎಂದೇ ಅರ್ಥ. ಆತ ಕಾಣಿಕೆಗಳನ್ನು ಸ್ವೀಕರಿಸುತ್ತಾನೋ ಇಲ್ಲವೋ ಅದೇನೂ ಅಂತಹ ದೊಡ್ಡ ವಿಷಯವೇ ಅಲ್ಲ. ಅವುಗಳನ್ನು ಅವನು ತೆಗೆದುಕೊಂಡು ಅವನ ಬಳಿ ಇಟ್ಟುಕೊಂಡರೆ ಅವು ತಾತ್ಕಾಲಿಕವಾಗಿ ಅವನ ವಶದಲ್ಲಿರುತ್ತವೆ ಅಷ್ಟೇ! ನಂತರದಲ್ಲಿ ನೀವು ಅವುಗಳನ್ನು ಹಿಂದಕ್ಕೆ ಪಡೆಯಲೂ ಬರುತ್ತದೆ. ನಿಮ್ಮ ಈ ಅಮೂಲ್ಯ ರತ್ನವನ್ನು ನಿಮ್ಮ ಒಳಕೋಣೆಯಿಂದ ಹೊರಕೋಣೆಗೆ ಸಾಗಿಸಿದ್ದೀರಿ, ನಿಮ್ಮ ರಾಜಾಶ್ವವನ್ನು ನಿಮ್ಮ ಅರಮನೆಯ ಲಾಯದ ಬದಲಾಗಿ ಹೊರಗಿರುವ ಇನ್ನೊಂದು ಲಾಯದಲ್ಲಿ ಕಟ್ಟಿರುವಿರೆಂದು ಭಾವಿಸಿಕೊಳ್ಳಿರಿ. ಇದಿಷ್ಟೇ ನಾನು ಹೇಳಲಿಕ್ಕಿರುವುದು'' ಎಂದ ಆ ಅಧಿಕಾರಿ ಮುಗುಳ್ನಗುತ್ತಾ.

ಚೀನ್ ರಾಜನಿಗೆ ಆ ಅಧಿಕಾರಿಯ ಮಾತಿನ ಅರ್ಥ ಥಟ್ಟನೇ ಹೊಳೆಯಿತು. ಕೂಡಲೇ ತನ್ನಲ್ಲಿದ್ದ ಚು-ಆಯ್-ಚಿ ಹಸುರು ರತ್ನವನ್ನು ಮತ್ತು ಚೂ ರಾಜಾಶ್ವವನ್ನು ಯು ರಾಜನಿಗೆ ಕಾಣಿಕೆಯಾಗಿ ಕಳುಹಿಸಿ ತನ್ನ ಸೈನ್ಯ ಆ ರಾಜ್ಯದ ಮೂಲಕ ಹಾದುಹೋಗಲು ಅನುಮತಿ ಕೋರಿದ.

ಚೀನ್ ರಾಜ್ಯದ ಅತ್ಯಮೂಲ್ಯ ನಿಧಿಯೇ ಕಾಣಿಕೆಯಾಗಿ ಬಂದಿದ್ದನ್ನು ಖುಷಿಯಿಂದ ಸ್ವೀಕರಿಸಿದ ಯು ರಾಜ ಹಿಂದೆ ಮುಂದೆ ಯೋಚಿಸದೇ ಕೂಡಲೇ ಅನುಮತಿ ಕೊಟ್ಟುಬಿಟ್ಟ! ಆದಾಗ್ಯೂ ಯು ರಾಜ್ಯದ ಹಿರಿಯ ಅಧಿಕಾರಿ ಕುಂಗ್-ತ್ಸು-ಚೀ ದೂರದೃಷ್ಟಿಯಿಂದ ಆಲೋಚಿಸಿ ಅನುಮತಿ ಕೊಡಬೇಡಿರಿ ಎಂದು ಪರಿಪರಿಯಾಗಿ ಕೇಳಿಕೊಂಡ.

''ರಾಜನ್, ನೀವು ತಪ್ಪು ಮಾಡುತ್ತಿದ್ದೀರಿ. ಕುವೋ ರಾಜನು ನಮ್ಮ ನೆರೆಯ ಆಪ್ತಮಿತ್ರ. ನಮ್ಮಿಬ್ಬರ ರಾಜ್ಯಗಳು ಮತ್ತು ಸೈನ್ಯಗಳು ಹಲ್ಲು ಮತ್ತು ತುಟಿಗಳು ಇದ್ದಂತೆ ಪರಸ್ಪರ ಸಹಕಾರದಿಂದ ಪರಸ್ಪರರನ್ನು ರಕ್ಷಿಸುತ್ತಿದ್ದೇವೆ. ಒಮ್ಮೆ ತುಟಿಯೇ ಹರಿದುಹೋಯಿತು ಎಂದರೆ ಹಲ್ಲುಗಳು ಚಳಿಗೆ ನಡುಗದೇ ಹೋಗುತ್ತವೆಯೇ? ತುಟಿಗಳೇ ಇಲ್ಲದೆ ಹಲ್ಲುಗಳಿಗೆ ರಕ್ಷಣೆ ಸಾಧ್ಯವೇ? ತುಟಿಯೆಂಬ ರಕ್ಷಣಾ ಕೋಟೆಯೇ ಬಿದ್ದುಹೋದರೆ ಹಲ್ಲುಗಳು ಸುರಕ್ಷಿತವಾಗಿ ಇರುತ್ತವೆ ಎಂದು ಭಾವಿಸುತ್ತೀರಾ? ನೀವು ಕುವೋ ಮೇಲೆ ದಾಳಿ ಮಾಡಲು ಚೀನ್ ರಾಜನ ಸೈನ್ಯಕ್ಕೆ ನಮ್ಮ ರಾಜ್ಯದ ಮೂಲಕ ಹಾದು ಹೋಗಲು ಅನುಮತಿ ಕೊಟ್ಟದ್ದೇ ಆದರೆ, ಅವರು ಕುವೋ ರಾಜನನ್ನು ಸೋಲಿಸಿ ಆ ರಾಜ್ಯವನ್ನು ಗೆದ್ದುಬಿಟ್ಟರೇ, ಮುಂದಿನ ಬಲಿಪಶು ಯಾರು? ನಾವೇ ಅಲ್ಲವೇ? ಕುವೋ ಇಲ್ಲದೇ ನಾವೊಬ್ಬರೇ ನಮ್ಮನ್ನು ಕಾಪಾಡಿಕೊಳ್ಳಲು ಸಾಧ್ಯವೇ? ಆದ್ದರಿಂದ ಇಂತಹ ಗೋಮುಖ ವ್ಯಾಘ್ರದಂತಹ ಮನವಿಯನ್ನು ದಯಮಾಡಿ ಪುರಸ್ಕರಿಸಬೇಡಿರಿ'' ಎಂದು ಮನಮುಟ್ಟುವಂತೆ ವಿವರಿಸಿದ.

ಕಾಣಿಕೆಗಳಿಂದ ಕಣ್ಣುತುಂಬಿಕೊಂಡ, ದೂರದೃಷ್ಟಿಯೇ ಇಲ್ಲದ, ಅತಿ ಆಸೆಯ ಯು ರಾಜ ಕುಂಗ್-ತ್ಸು-ಚೀ ಯ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳಲೇ ಇಲ್ಲ. ಅನುಮತಿ ಸಿಕ್ಕ ಕೂಡಲೇ ಚೀನ್ ಸೈನ್ಯ ಯು ರಾಜ್ಯದ ಮೂಲಕ ಹಾದು ಹೋಗಿ ಕುವೋ ರಾಜನನ್ನು ಸೋಲಿಸಿ ವಿಜಯಿಯಾಗಿ ಹಿಂದಿರುಗಿತು. ಒಂದೆರಡು ವರ್ಷಗಳ ನಂತರ ಚೀನ್ ರಾಜನಿಗೆ ತನ್ನ ರಾಜ್ಯದ ಅಮೂಲ್ಯ ನಿಧಿಯನ್ನು ಮರಳಿ ಪಡೆಯುವ ಆಸೆಯಾಗಿ ಯು ರಾಜ್ಯದ ಮೇಲೆ ದಾಳಿ ಮಾಡಿ ಅದನ್ನು ಸುಲಭವಾಗಿ ವಶಪಡಿಸಿಕೊಂಡ. ಹಿರಿಯ ಅಧಿಕಾರಿ ತುನ್‌ಶೀ ಯು ರಾಜನಲ್ಲಿಟ್ಟಿದ್ದ ಚು-ಆಯ್-ಚಿ ಹಸುರು ರತ್ನವನ್ನು ಮತ್ತು ಚೂ ರಾಜಾಶ್ವವನ್ನು ಮರಳಿ ತಂದು ಚೀನ್ ರಾಜನಿಗೆ ಒಪ್ಪಿಸಿದ. ದೂರದೃಷ್ಟಿಯ ಯೋಜನೆ ಎಂದರೆ ಇದೇ ಅಲ್ಲವೇ?

ತುಷಾರ ★ ಏಪ್ರಿಲ್, 2014 69

Kannada Rathi Kathegalu

DOWNLOAD

kannada rathi kathegalu download, kannada.rathi kathegalu, rathi vignana kannada kathegalu, rathi kathegalu kannada pdf, kannada rathi vigyan kathegalu, kannada rathi vignana kathegalu kannada font

d9dee69ac8